ಶ್ರೀ ಅಣ್ಣಾರಾವ್‌ಗಣಮುಖಿ.—ಅದು ನನ್ನ ಅವಗಾಹನೆಗೆ ಬಂದಿಲ್ಲ. ನನ್ನ ಅಭಿಪ್ರಾಯದ ಪ್ರಕಾರ ಈ ಹೋಬಳಿಯಿಂದ ಎಂಟು ಮೈಲಗಳ ದೂರದಲ್ಲಿ ಹಾಸನ ಇದೆಯೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ರಾಮಯ್ಯ.—ಎಜುಕೇಷನ್ ರಿಫಾರಮ್‌ನ ಪ್ರಕಾರ ಇಲ್ಲಿಗೆ ಒಂದು ಹೈಸ್ಕೂಲನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೀರಾ?

ಶ್ರೀ ಅಣ್ಣಾರಾವ್ ಗಣಮುಖಿ.—ಆ ರೀತಿ ತೀರ್ಮಾನ ಇಲ್ಲ. ಈಗಿನ ನರ್ಮ್‌ಪ್ರಕಾರ ಇಲ್ಲಿ ಹೈಸ್ಕೂರ್ ಆಗಲಕ್ಕಿಲ್ಲ.

ಶ್ರೀ ಎಸ್. ಆರ್. ರಾಮಯ್ಯ.—ಹಾಗಿದ್ದ ಪಕ್ಷದಲ್ಲಿ 10 ಮೈಲಗಳ ರೇಡಿಯಸ್ಸಿನೊಳಗೆ ಏನಾದರೂ ಈ ನೀತಿಯನ್ನು ಅನುಸರಿಸಬೇಕೆಂದು ಇದ್ದಾರೆಯೇ?

ಶ್ರೀ ಅಣ್ಣಾರಾವ್ ಗಣಮುಖಿ.—ಅದೇನೂ ಇಲ್ಲ. ಆದರೆ ಮುನಿಸಿಪಾಲಟಿಯವರಾಗಲ, ಡಿಸ್ಟ್ರಿಕ್ಟ್ ಬೋರ್ಡಿನವರಾಗಲ ಅಥವಾ ಖಾಸಗಿ ಸಂಸ್ಥೆಯವರಾಗಲ ಇಲ್ಲ ಹೈಸ್ಕೂಲನ್ನು ಕಟ್ಟಿಸದೇ ಹೋದರೆ ಆಗ ಸರ್ಕಾರ ಒಂದು ಹೈಸ್ಕೂಲನ್ನು ತೆಗೆಯಬೇಕೆಂಬ ಒಂದು ನೀತಿಯನ್ನಿಟ್ಟುಕೊಂಡಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಎಷ್ಟು ಮೈಲಗಳ ರೇಡಿಯಸ್ಸಿನಲ್ಲಿ ಒಂದು ಹೈಸ್ಕೂಲನ್ನು ತೆಗೆಯಬೇಕೆಂಬ ನೀತಿಯನ್ನು ಹಾಕಕೊಂಡಿದ್ದೀರಿ?

ಶ್ರೀ ಅಣ್ಣಾರಾವ್‌ಗಣಮುಖಿ.—ಈಗಿನ ನರ್ಮ್ ಪ್ರಕಾರ ಕೇವಲ ಐದು ಅಥವಾ ಎಂಟು ಮೈಲಗಳ ರೇಡಿಯಸ್ಸಿನಲ್ಲಿ ಒಂದು ಹೈಸ್ಕೂಲು ಇರಬೇಕೆಂದಿದೆ.

Repairs to Channarayapatna—Bagur Road.

*Q.—578. Smt. DYAVAMMA (Gandasi).—

Will the Government be pleased to state :—

(a) the date of receipt of representation requesting them to carry out repairs to the 7 mile long road from Channarayapatna to Bagur Hobli ;

(b) whether they are aware of the fact that the people are experiencing hardships for lack of communication facilities and that the repair work has not yet commenced despite submission of such representation ;

(c) if so, whether they will carry out repairs to the above road this year?

A.—Sri T. SUBRAMANYA (Minister for Law, Labour and Local Self-Government).—

(a) 8th November 1956 urging that the road may be transferred to the Public Works Department and improved by Government.

(b) Yes. The road is not in a good condition for vehicular traffic in all seasons.

(c) Metalling and construction of some culverts and causeways will be taken up by the District Board, Hassan, as and when its funds permit.

†ಶ್ರೀಮತಿ ದ್ಯಾವಮ್ಮ.—ನುಮಾರು 10-12 ವರ್ಷಗಳಿಂದ ಈ ರಸ್ತೆಯು ದುರಸ್ತಿ ಕೆಲಸವಾಗ ಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿವೆಯೇ?

ಶ್ರೀ ಟಿ. ಸುಬ್ರಹ್ಮಣ್ಯ.—ಬಂದಿವೆ. 10-12 ವರ್ಷಗಳಿಂದ ಮಾತ್ರವೇ ಅಲ್ಲದೆ ಬಹು ಕಾಲದಿಂದ ಮನವಿಗಳು ಬಂದಿವೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ರಸ್ತೆ ಬಹಳ ಪ್ರಮುಖವಾದುದು ಎಂದು ಸರ್ಕಾರಕ್ಕೆ ಗೊತ್ತಾಗಿದೆಯೇ?

ಶ್ರೀ ಟಿ. ಸುಬ್ರಹ್ಮಣ್ಯ.—ಬಹಳ ಮುಖ್ಯವಾದುದು ಎಂದು ಗೊತ್ತಾಗಿದೆ.

Smt. VIJAYA RAGHAVENDRA RAO.—How many culverts and causeways are there?

Sri T. SUBRAMANYA.—The exact number is not before me.

†ಶ್ರೀಮತಿ ದ್ಯಾವಮ್ಮ.—ಈ ರಸ್ತೆ ರಿಪೇರಿ ಆಗದಿರುವುದರಿಂದ, ನುಮಾರು 40-50 ಹಳ್ಳಿಗಳಲ್ಲ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಸುಬ್ರಹ್ಮಣ್ಯ.—ಬಂದಿದೆ. ಇದರಲ್ಲಿ ಒಂದು ವಿಷಯವನ್ನು ಹೇಳಬೇಕಾಗಿದೆ. ಈ ರಸ್ತೆ ರಿಪೇರಿಯನ್ನು ಬಹಳ ದಿವಸಗಳಿಂದ ಸರ್ಕಾರದವರೇ ತೆಗೆದುಕೊಳ್ಳಬೇಕೆಂದಿದ್ದರು. ಆದರೆ ಈಗ ಡಿಸ್ಟ್ರಿಕ್ಟ್ ಬೋರ್ಡ್, ಲೋಕಲ್ ಬೋರ್ಡ್ ಆಕ್ಟ್‌ಗಳೇನಿವೆ ಅವು ಪಾಸಾದಮೇಲೆ ಪ್ರತಿಯೊಂದು ಹೋಬಳಿಯಲ್ಲಿ ಯಾವಯಾವುವು ಅತಿ ಪ್ರಾಮುಖ್ಯವಾದ ರಸ್ತೆಗಳೆಯೋ ಅವುಗಳ ರಿಪೇರಿ ಕೆಲಸವನ್ನು ಪಿ.ಡಬ್ಲ್ಯು.ಡಿ. ಯವರು ತೆಗೆದುಕೊಳ್ಳಬೇಕೆಂದು ಹೇಳಿದೆ. ಆ ಸಮಯದಲ್ಲಿ ಈ ರಸ್ತೆ ಅತಿ ಪ್ರಾಮುಖ್ಯವಾದುದೆಂದು ಅನೇಕ ಮನವಿಗಳು ಬಂದಿರುವುದರಿಂದ ಅದನ್ನೂ ಸಹ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡುತ್ತೇವೆ. ಎರಡನೆಯದಾಗಿ ಹೋದ ವರ್ಷ ರೂರಲ್ ಕಮ್ಯೂನಿಕೇಷನ್ ಗ್ರಾಂಟಿನಲ್ಲ ಹಾಸನದ ಡಿಸ್ಟ್ರಿಕ್ಟ್ ಬೋರ್ಡಿಗೆ 99 ಸಾವಿರ 310 ರೂಪಾಯಿಗಳನ್ನು ಈ ಬಾಬಿಗೆ ಕೊಟ್ಟಿದ್ದೇವೆ. ಈ ವರ್ಷವೂ ಅಷ್ಟೇ ದುಡ್ಡನ್ನು ಕೊಟ್ಟಿದ್ದೇವೆ. ಆದರೂ ಸಾಧ್ಯವಾದಷ್ಟು ಜಾಗ್ರತೆ ರಸ್ತೆ ರಿಪೇರಿ ಕೆಲಸವನ್ನು ಮಾಡಬೇಕೆಂದು ಜಿಲ್ಲಾ ಬೋರ್ಡಿಗೆ ತಿಳಿಸುತ್ತೇವೆ.

ಶ್ರೀಮತಿ ದ್ಯಾವಮ್ಮ.—ಈ ವರ್ಷ ಇನ್ನೂ ಏನೂ ರಸ್ತೆ ರಿಪೇರಿಯ ಕೆಲಸವನ್ನು ಮಾಡಲಿಲ್ಲವೇ?

ಶ್ರೀ ಟಿ. ಸುಬ್ರಹ್ಮಣ್ಯ.—ಈ ವರ್ಷ ಪೂರ್ತಿಯಾಗಿ ಮಾಡಲಕ್ಕಾಗಲಲ್ಲ. ಹಿಂದಿನ ಎಸ್ಟಿಮೇಟ್ ಪ್ರಕಾರ 50 ಸಾವಿರ ರೂಪಾಯಿಗಳಾಗುತ್ತದೆ. ಡಿಸ್ಟ್ರಿಕ್ಟ್ ಬೋರ್ಡಿನವರು ಅಷ್ಟೊಂದು ದುಡ್ಡನ್ನು ಒಂದು ವರ್ಷದಲ್ಲಯೇ ಖರ್ಚು ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಈಗ ಸ್ವಲ್ಪಭಾಗ ಮಟ್ಟಿಗಾದರೂ ರಸ್ತೆ ರಿಪೇರಿ ಮಾಡಿ ಎಂದು ಸೂಚನೆ ಕೊಡುತ್ತೇವೆ.